ಒಂದೆರಡು ಹೋಗಿ ತೆಂಗಿನ ಮೊಟ್ಟೆಯಲ್ಲಿ ಸಿಗಾಕಿಕೊಂಡು ಢಮಾರ್ ಎಂದ ಸದ್ದಿಗೆ ಹೆದರಿಬಿದ್ದ ಕೋತಿಯೊಂದು ಪ್ರಪಂಚವೇ ಪ್ರಳಯವಾಯಿತೆಂಬಷ್ಟು ಭೀಕರವಾಗಿ ಕಿರುಚುತ್ತ ಕೆಳಕ್ಕೆ ಬಿದ್ದು ಸತ್ತೆನೋ ಕೆಟ್ಟೆನೋ ಎಂದು ತೊಡರುಗಾಲಲ್ಲಿ ಓಡಲಾರಂಭಿಸಿತು. ತಾನೇನೋ ಮಹತ್ಸಾಧನೆ ಮಾಡಿದೆನೆಂಬಂತೆ ಅದನ್ನು ಹಿಡಿದುಬಿಡುವವರಂತೆ ಹಾರಿಗಲೆ ಓಡಿದರು. ಆ ಭರದಲ್ಲಿ ಬದುವೊಂದರ ತಗ್ಗಿನಲ್ಲಿ ನೇಗಿಲ ಗೆರೆಯೊಳಗೆ ಇಟ್ಟ ಹೆಜ್ಜೆ ತಿರುಚಿ ಮುಂಗಾಲು ಉಳುಕಿಸಿಕೊಂಡರು. ಕುಂಟುತ್ತ ವಾಪಸು ಬಂದವರು, ರಾಕೆಟ್ಟಿನ ತಂತ್ರವೇ ಚೆನ್ನಾಗಿ ಫಲಿಸುತ್ತದೆಂದು ಇನ್ನಷ್ಟು ರಾಕೆಟ್ಟಿಗೆ ಬೆಂಕಿ ಹಚ್ಚಿದರು. ಕೆಲವು ಗರಿಗಳ ಸಂಧಿಯಲ್ಲೇ ತೂರಿಹೋಗಿ ಆಕಾಶದಲ್ಲಿ ಸಿಡಿದವು. ಮತ್ತೊಂದು ರಾಕೆಟ್ಟು ಒಣಗಿದ್ದ ತೆಂಗಿನಮೊಟ್ಟೆಗೆ ಸಿಗಾಕಿಕೊಂಡು ಅಲ್ಲೇ ಸುರ್‌ಸುರ್‌ಬತ್ತಿಯಂತೆ ಸೊರ್‌ಗುಟ್ಟಿ ಸಣ್ಣಗೆ ಬೆಂಕಿ ಹತ್ತಿಕೊಂಡದ್ದು, ನೋಡನೋಡುತ್ತಿದ್ದಂತೆಯೇ ಧಗಧಗನೆ ಉರಿಯಲಾರಂಭಿಸಿತು. ಕಂದೀಲಿನ ಥರ ಆಕಾಶದಲ್ಲಿ ಉರಿಯುತ್ತಿರುವ ತೆಂಗಿನಮರಕ್ಕೆ ನೆಲದಿಂದ ನೀರೋ ಮಣ್ಣೋ ಎಸೆಯಲಾರದೇ ಅಸಹಾಯಕರಾಗಿ ನಿಂತು ನೋಡಲಾರಂಭಿಸಿದ್ದರು... ಅದರ ಫೋಟೊನೊ, ವಿಡಿಯೋನೋ ಮಾಡೋಣ ಅಂದರೆ ಕೈಯ್ಯಲ್ಲಿ ಕ್ಯಾಮೆರಾವೇ ಇಲ್ಲವಲ್ಲ ಎಂದು ನಿಂತಲ್ಲಿಯೇ ತವಕಿಸಲಾರಂಭಿಸಿದ್ದರು.

'ಹಿಂಗೇ, ಹಿಂಗೆ ಸಾರ್... ಅವತ್ತು ಮುಂಗಾರು ಮಳೆ ಬಂದಾಗ ಬೆಳಕಿನ ಉದ್ದಗೆರೆ ನಮ್ಮ ಮುಂದೆ ಹಾದುಹೋದಂತಾದಾಗ ಮೂಲೆಮರಕ್ಕೆ ಸಿಡಿಲು ಬಡಿದು ಸುರಿಯೋ ಮಳೆಯಲ್ಲೂ ಧಗಧಗ ಹತ್ತಿಕೊಂಡು ಉರಿದಿದ್ದು...' ಎಂದು ಸುಟ್ಟುಹೋಗಿದ್ದ ಇನ್ನೊಂದು ಮರಕ್ಕೆ ಸಮನ್ವಯಗೊಳಿಸಲು ಪ್ರಯತ್ನಿಸಿದ. 'ಅವತ್ತು ಸಿಡಿಲಿನ ಹೊಡೆತದಿಂದ ನಾವು ಬದುಕಿದ್ದೇ ಪವಾಡ...' ಎನ್ನುತ್ತ ಮರವೇ ದೇವರಂತೆ ಅಡ್ಡನಿಂತು ತಮ್ಮನ್ನು ಕಾಪಾಡಿತ್ತೆಂದು ನಮಸ್ಕರಿಸಿದ. 'ಅಯ್ಯೋ, ಇದ್ರು ಮನೆಕಾಯೋಗ... ನಮ್ಮ ತೋಟನೆಲ್ಲ ಹಾಳುಗೆಡುವುತ್ತೈತಲ್ಲ...' ಎಂದು ಕೋತಿಗಳಿಗೆ ಹಿಡಿಶಾಪ ಹಾಕುವ ವೇಳೆಗೆ ಬೆಂಕಿಗೆ ಬೆಂದು ಅರೆಜೀವವಾದ ಎರಡು ಮಂಗಗಳು ಪುತಪುತನೆ ನೆಲಕ್ಕೆ ಉದುರಿಬಿದ್ದವು. ಎಲ್ಲಿ ತಪ್ಪಿಸಿಕೊಂಡು ಹೋಗಿಬಿಟ್ಟಾವೋ ಎಂದು ಮಣ್ಣಹೆಂಟೆಯಿಂದ ಹೊಡೆಯಲುಪಕ್ರಮಿಸುವ ವೇಳೆಗೆ ಅವು ಇನ್ನು ತಮ್ಮಿಂದ ಬದುಕುವುದು ಸಾಧ್ಯವಿಲ್ಲ ಎಂದು ಇಹಲೋಕ ತ್ಯಜಿಸಿದವು. ಆಕ್ರೋಶದಿಂದ ಅವುಗಳ ಕುತ್ತಿಗೆಗೊಂದೊಂದು ಹಗ್ಗದಿಂದ ನೇಣುಬಿಗಿದು, ತಮ್ಮನ್ನು ಎದುರುಹಾಕಿಕೊಂಡರೆ ಏನು ಗತಿಯಾಗುತ್ತದೆಂದು ಉಳಿದ ಮಂಗಗಳಿಗೆ ತಿಳಿಯಲೆಂಬಂತೆ ಮಾವಿನಮರದ ಕೊಂಬೆಗೆ ನೇತುಹಾಕಿಬಿಟ್ಟರು.

ಉಳುಕಿದ ಕಾಲಿಗೆ ನೀಲಗಿರಿ ಎಣ್ಣೆ ಹಚ್ಚಿ ಹೆಂಡತಿ ನೀವುತ್ತಿದ್ದರೆ ಅದರ ವಾಸನೆಯನ್ನೂ ಮೀರಿದ ಕೆಟ್ಟವಾಸನೆ ಬರುತ್ತಿರುವುದೆಲ್ಲಿಂದ ಎಂದು ಸಂಶೋಧನೆ ಮಾಡಲು ಮಲ್ಲೇಶಿಗೆ ಕಳಿಸಿದರೆ, ಅವನು ಆ ಸತ್ತ ಮಂಗಗಳದೇ ಎಂದು ವರದಿ ತಂದನು. ಇನ್ನುಮುಂದೆ ಆ ವಾಸನೆ ಸಹಿಸಿಕೊಂಡಿರಲು ಸಾಧ್ಯವಾಗದೇ, ಅದರಿಂದ ಜೈವಿಕ ಗೊಬ್ಬರವಾದರೂ ಆಗುತ್ತದೆಂದು ಹೇಳಿ ತೆಂಗಿನಬುಡದಲ್ಲಿ ಗುಂಡಿತೆಗೆದು ಹೂಳುವಂತೆ ಸಲಹೆ ನೀಡಿದರು.

ಗಾಬರಿಬಿದ್ದ ಕೋತಿಗಳ ಹಿಂಡು ಮಾರನೇ ದಿನವೇ ತೋಟ ತೊರೆದು ಹೋದ ಖುಷಿಯಲ್ಲಿ 'ಕೋತಿಗಳೂ ಸಾರ್ ಕೋತಿಗಳು...' ಎಂಬ ಪ್ರಬಂಧ ಬರೆದು, ಎಲ್ಲಿ ಕಾಪಿ ಮಾಡಿ ತಮ್ಮ ಹೆಸರನ್ನು ಹಾಕಿಕೊಂಡುಬಿಟ್ಟಾರೋ ಎಂದು ಪಿಡಿಎಫ್‌ನಲ್ಲಿ ಮೇಲ್ ಮಾಡಿದರು. ಉತ್ತರ ಬರದಾದಾಗ ಪ್ರೊ. ಕಾಳೇಶ್‌ರನ್ನೇ ಹುಡುಕಿಕೊಂಡು ಹೋಗಿ, ಅದು ಏನು ಹೇಳುತ್ತದೆಂದು